PlanetRead

Literacy for a Billion

Movie: Bhakta Kumbhara
Year:

Song: Paratatvavanu Balla
Lyricist:

ಪರತತ್ವವನು ಬಲ್ಲ
ಪಂಡಿತನು ನಾನಲ್ಲಾ
ಹರಿನಾಮವೊಂದುಳಿದು
ನನಗೇನು ತಿಳಿದಿಲ್ಲಾ
ನನಗೇನು ತಿಳಿದಿಲ್ಲಾ

ಮಾನವಾ ದೇಹವೂ
ಮೂಳೆ ಮಾಂಸದ ತಡಿಕೇ
ಮಾನವಾ ಮೂಳೆ ಮಾಂಸದ ತಡಿಕೇ
ಇದರ ಮೇಲಿದೇ ತೊಗಲಿನ ಹೊದಿಕೆ
ತುಂಬಿದೆ ಒಳಗೇ ಕಾಮಾದಿ ಬಯಕೇ
ಮಾನವಾ ಮೂಳೆ ಮಾಂಸದ ತಡಿಕೇ

ನವ ಮಾಸಗಳೂ ಹೊಲಸಲಿ ಕಳೆದೂ
ನವ ರಂಧ್ರಗಳಾ ಕಳೆದೂ ಬೆಳೆದೂ
ಬಂದಿದೇ ಭುವಿಗೇ ಈ ನರ ಗೊಂಬೇ
ನಂಬಲೂ ಏನಿದೇ ಸೌಭಾಗ್ಯವೆಂದೇ
ಮಾನವಾ ಮೂಳೆ ಮಾಂಸದ ತಡಿಕೆ
ದೇಹವೂ ಮೂಳೆ ಮಾಂಸದ ತಡಿಕೇ

ಉಸಿರಾಡುವ ತನಕ
ನಾನು ನನದೆಂಬ ಮಮಕಾರಾ
ನಿಂತ ಮರುಗಳಿಗೇ
ಮಸಣದೆ ಸಂಸ್ಕಾರಾ
ಮಣ್ಣಲೀ ಬೆರತೂ ಮೆಲ್ಲಗೇ ಕೊಳತೂ
ಮುಗಿಯುವಾ ದೇಹಕೇ ವ್ಯಾಮೋಹವೇಕೇ
ಮಾನವಾ ಮೂಳೆ ಮಾಂಸದ ತಡಿಕೆ
ದೇಹವೂ ಮೂಳೆ ಮಾಂಸದ ತಡಿಕೇ

ಬರುವಾಗ ಬೆತ್ತಲೇ
ಹೋಗುವಾಗ ಬೆತ್ತಲೇ
ಬಂದು ಹೋಗುವ ನಡುವೇ
ಬರೀ ಕತ್ತಲೇ
ಭಕ್ತಿಯ ಬೆಳಕೂ ಬಾಳಿಗೇ ಬೇಕೂ
ಮುಕ್ತಿಗೇ ವಿಠಲನಾ ಕೊಂಡಾಡಬೇಕೂ
ಮಾನವಾ ಮೂಳೆ ಮಾಂಸದ ತಡಿಕೆ
ದೇಹವೂ ಮೂಳೆ ಮಾಂಸದ ತಡಿಕೇ
ಇದರ ಮೇಲಿದೇ ತೊಗಲಿನ ಹೊದಿಕೆ
ತುಂಬಿದೆ ಒಳಗೇ ಕಾಮಾದಿ ಬಯಕೇ
ಮಾನವಾ ಮೂಳೆ ಮಾಂಸದ ತಡಿಕೇ
ವಿಠಲಾ ವಿಠಲಾ
ಪಾಂಡುರಂಗ ವಿಠಲಾ
ವಿಠಲಾ ವಿಠಲಾ
ಪಾಂಡುರಂಗ ವಿಠಲಾ
ವಿಠಲಾ ವಿಠಲಾ
ಪಾಂಡುರಂಗ ವಿಠಲಾ
ವಿಠಲಾ ವಿಠಲಾ
ಪಾಂಡುರಂಗ ವಿಠಲಾ
ವಿಠಲಾ ವಿಠಲಾ
ಪಾಂಡುರಂಗ ವಿಠಲಾ

ಪಾಂಡುರಂಗ ವಿಠಲಾ

ಪಾಂಡುರಂಗ ವಿಠಲಾ

ಜೈ ಪುಂಡಲೀಕ ವರದೇ

ಹರಿ ವಿಠ್ಠಲೇ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*